ಶ್ರೀ ಟಿ. ಎಚ್. ಮೂಡಲಗಿರಿಗೌಡ.—1954-55 ನೆಯ ಸಾಲಿನ ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನ Receipts ಮತ್ತು Expenditure ಏನು ?

ಶ್ರೀ ಟಿ. ಚನ್ನಯ್ಯ.—ಆ ಸ್ಟೇಟ್‌ಮೆಂಟ್ ಈಗ ನನ್ನಲ್ಲಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇಲ್ಲಿ 1,29,525-9-0 ನ್ನು ಖರ್ಚುಮಾಡಿದೆಯೆಂದು ಹೇಳಿದ್ದೀರಿ. ಹಣ ಬಹಳ ಕಡಮೆ ಖರ್ಚಾಗಿದೆ, ಕೆಲಸ ಬಹಳ ಕಡಮೆ ಆಗಿದೆಯೆಂದರೆ ಒಪ್ಪುತ್ತೀರಾ ?

Sri T. CHANNIAH.—It is a matter of opinion.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಇನ್ನೂ ಎಷ್ಟು ಹಣ ಡಿಸ್ಟ್ರಿಕ್ಟ್ ಬೋರ್ಡಿನವರಲ್ಲಿ ಉಳಿದಿದೆ ?

Sri T. CHANNIAH.—Notice.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡಿಗೆ ಸರ್ಕಾರದಿಂದ ಬರಬೇಕಾದ ಬಾಕಿ ಇನ್ನೂ ಹೇರಳವಾಗಿದೆ; ನುಮಾರು 3 ಲಕ್ಷ ರೂಪಾಯಿಗಳ ವರೆಗೂ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕಾಗುತ್ತದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿಗೆ ಬರಬೇಕಾದ ಹಣ ಇಷ್ಟು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅಂತೂ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಎಜುಕೇಷನ್ ಡಿಪಾರ್ಟ್‌ಮೆಂಟಿನಿಂದ ಈ ಡಿಸ್ಟ್ರಿಕ್ಟ್ ಬೋರ್ಡಿಗೆ ಸ್ವಲ್ಪ ಹಣ ಸಲ್ಲಬೇಕಾಗಿದೆ. ಇಷ್ಟೇ ಹಣ ಬರಬೇಕೆಂಬುದಾಗಿ ಈಗ ಖಚಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಬಹಳ ದಿವಸದಿಂದ ಬಹಳವಾದ ಹಣ ಸರ್ಕಾರದಲ್ಲಿ ನಿಂತಿದೆಯೆಂದರೆ ಒಪ್ಪುತ್ತೀರಾ ? ನುಮಾರು ಎರಡು ವರ್ಷಗಳಿಂದ ನಿಂತಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಏಕೆ ಹೀಗೆ ನಿಲ್ಲಿಸಿಕೊಂಡಿದ್ದೀರಿ ? ಡಿಸ್ಟ್ರಿಕ್ಟ್ ಬೋರ್ಡಿನವರ ಕೆಲಸಕಾರ್ಯಗಳನ್ನು ನಿಲ್ಲಿಸಬೇಕೆಂದು ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಆಗಲೇ ಸೂಚನೆ ಇತ್ತಿದ್ದಾರೆ. ಆಯಾ ಡಿಪಾರ್ಟ್‌ಮೆಂಟಿನವರು ಕೊಡಬೇಕಾದ ಮೊಬಲಗುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಜಮಾ ಮಾಡತಕ್ಕದೆಂದು ಹೇಳಿದ್ದೇವೆ. ಇನ್ನೂ ಅವರಿಂದ ಯಾವ ಉತ್ತರವೂ ಬಂದಿಲ್ಲ. ಕೊಡಬೇಕಾದ ಹಣವನ್ನು ಬೇಗ ಕೊಡುವ ಹಾಗೆ instructions ಕೊಟ್ಟಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಎಷ್ಟು ಕೊಡಬೇಕೋ ಅದನ್ನು ಜಾಗ್ರತೆ ಕೊಡಬೇಕೆಂಬುದಾಗಿ move ಮಾಡುವುದಕ್ಕಾಗುವುದಿಲ್ಲವೇ?

Sri T. CHANNIAH.—That is not. . . .

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ತಾಲ್ಲೂಕಿನಲ್ಲಿ ನೀತುವೆಗಳು ಏನೂ ಆಗಿಲ್ಲವೆಂದು ಹೇಳಿದ್ದೀರಿ. Channels ಮತ್ತು Bridges ಕೆಲಸ ಯಾವುದೂ ಆಗಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಈ ವರ್ಷ ಯಾವುದನ್ನೂ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆಯಿಲ್ಲವೆಂದು ಬಹುಶಃ ಈ ವರ್ಷ ಬಿಡಲಾಗಿದೆ. ಅವಶ್ಯಕವಿದೆಯೆಂದು ಹೇಳಿದರೆ ಮುಂದಿನ ವರ್ಷ ನೋಡೋಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅವಶ್ಯಕತೆಯಿದೆಯೆಂದು ವರದಿಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಬರುತ್ತಿದೆ; ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಬಗ್ಗೆ ಜಾಗ್ರತೆ ಸೂಚನೆ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಕೊಡುತ್ತೇವೆ.

Rural water Supply in Chitaldrug District.

Q—.272. Sri G. DUGGAPPA (Holalkere—Scheduled Castes).—

Will the Government be pleased to state :—

(*a*) the amount that has been spent on rural water supply in Chitaldrug District during 1953-54 and 1954-55 ;

(*b*) the amount that was made available for this purpose ;

(*c*) the amount lapsed ?

A.—Sri T. CHANNIAH (Minister for Public Health and Local Self-Government).—

	1953-54			*1954-55*		
	Rs.	a.	p.	Rs.	a.	p.
(*a*) (1) Out of "40-A. Rural Development" grants.	20,000	0	0	7,359	8	0
(2) Land Revenue assignment ...	9,728	2	0	48,153	2	0
(*b*) (1) Out of "40-A. Rural Development" grants.	20,000	0	0	1,00,000	0	0
(2) Land Revenue assignment ...	1,80,332	9	0	...		
(*c*)	Nil			Nil.		

ಶ್ರೀ ಜಿ. ದುಗ್ಗಪ್ಪ.—2,000 ಬಾವಿಗಳಲ್ಲಿ ನಂಪೂರ್ಣವಾಗಿ ಆಗದಿರುವ ಬಾವಿಗಳೆಷ್ಟು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅವಶ್ಯಕತೆ ಯಾವ ಯಾವ ಹಳ್ಳಿಗಳಲ್ಲಿದೆಯೆಂದು ಒಂದು ಪಟ್ಟಿಯನ್ನು ಇತ್ತೀಚೆಗೆ ತಯಾರು ಮಾಡಿದ್ದಾರಲ್ಲವೇ ?

ಶ್ರೀ ಟಿ. ಚನ್ನಯ್ಯ.—ರೆವಿನ್ಯೂ ಇಲಾಖೆಯಲ್ಲ ಆ statistics ಎಲ್ಲವನ್ನೂ collect ಮಾಡಿಟ್ಟಿರ ಬಹುದು; ನಮ್ಮ ಗಮನಕ್ಕೆ ಅದು ಬಂದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಆ ಪಟ್ಟಿಯ ಪ್ರಕಾರ ನೋಡಿದರೆ ಅಲ್ಲಿಗೆ ಒದಗಿಸಿರತಕ್ಕ ಮೊಬಲಗು ಬಹಳ ಕಡಮೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಕಡಮೆಯೆಂದು ತಮ್ಮ ಅಭಿಪ್ರಾಯವಿರಬಹುದು. ಆದರೆ ಎಲ್ಲಾ ಡಿಸ್ಟ್ರಿಕ್ಟ್‌ಗೂ ಕೂಡ ನರಿನಮನಾಗಿ ಆಯಾ ಭಾಗದ ಪ್ರಜಾ ನಂಖ್ಯೆಯ ಆಧಾರದಮೇಲೆ ಈ ಹಣವನ್ನು ಹಂಚಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಆಯಾ ಡಿಸ್ಟ್ರಿಕ್ಟಿನ ಪ್ರಜಾ ನಂಖ್ಯೆಯಮೇಲೆ ಹಂಚುತ್ತೀರಾ ? ಅಥವಾ ಅಲ್ಲಿನ ಕುಡಿಯುವ ನೀರಿನ ಬಾವಿಗಳ ಅವಶ್ಯಕತೆ ನೋಡಿಕೊಂಡು ಹಂಚುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನು consider ಮಾಡುತ್ತೇವೆ. ಎಲ್ಲಿ ಅವಶ್ಯಕತೆಯಿದೆ, ಎಲ್ಲ ತೊಂದರೆಯಿದೆ ಎಂದು ಅಂಕಿ ಅಂಶಗಳನ್ನು collect ಮಾಡಿ ಸರ್ಕಾರಕ್ಕೆ ಇಷ್ಟು ಹಣ ಕೊಡಬೇಕೆಂದು ಹೇಳಿ special ಆಗಿ ಶಿಫಾರನ್ಸು ಬಂದಿದ್ದರೆ ಅಲ್ಲಿಗೆ ಸ್ವಲ್ಪ ಹೆಚ್ಚಿಗೆ ಹಣವನ್ನು ಒದಗಿಸುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಆದಷ್ಟುಮಟ್ಟಿಗೆ ಈ ವರ್ಷ ಚಿತ್ರದುರ್ಗಕ್ಕೆ ಹೆಚ್ಚು ಹಣವನ್ನು ಮಂಜೂರು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆಯಿದ್ದರೆ ಮಾಡುತ್ತೇವೆ.

Sri Mulka GOVINDA REDDY.—Has any survey been made regarding the number of wells that are required to provide water to all the villages in the District, Sir ?

Sri T. CHANNIAH.—Notice please.

Sri Mulka GOVINDA REDDY.—How many applications were received for wells for these villages in the District ?

Sri T. CHANNIAH.—Notice.

Sri Mulka GOVINDA REDDY.—In answer to (*c*) you have stated 'nil'; in answer to (*a*)(2) it is stated that Land Revenue assignment 48,153-2-0 has been set apart for rural water supply in the District; which one should I take as correct ?

Sri T. CHANNIAH.—The amount paid out of "Land Revenue Assignment" will be credited to the village panchayets. No amount will lapse.

Sri Mulka GOVINDA REDDY.—out of Rs. 1,83,332-9-0 only 9,728-2-0 was spent; is it not, Sir ?

Sri T. CHANNIAH.—May be. Some amonnt might have been spent. The remaining amount which is unspent will be at the credit of the village panchayets.

ಶ್ರೀ ಜಿ. ಶಿವಪ್ಪ.—ಹಳ್ಳಿಗಾಡುಗಳಿಗೆ ನೀರು ಒದಗಿಸುವುದಕ್ಕೆ Protected Water Supply Scheme to villages or group of villages ಎಂದು ಒಂದು ಸ್ಕೀಮನ್ನೇನಾದರೂ ಇಟ್ಟುಕೊಂಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಗ್ರಾಮಾಂತರ ಪ್ರದೇಶಗಳಿಗೆ ಅಂಥ ಸ್ಕೀಮು ಯಾವುದೂ ಇಲ್ಲ. ಮೂರು-ನಾಲ್ಕು ಸಾವಿರ ಜನಸಂಖ್ಯೆಯಿರುವ ದೊಡ್ಡ ಗ್ರಾಮಗಳಲ್ಲ ಅಂಥ ಸ್ಕೀಮಿನ ಅವಶ್ಯಕತೆಯಿದೆಯೆಂದು ಕಂಡು ಬಂದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಶಿವಪ್ಪ.—ಈ ಸ್ಕೀಮನ್ನು ಈಗ ಎಷ್ಟು ಕಡೆಗಳಲ್ಲಿ ಮಂಜೂರು ಮಾಡಿದ್ದೀರಿ ?

ಅಧ್ಯಕ್ಷರು.—ಅಂಥ ಸ್ಕೀಮೇ ಇಲ್ಲ.

Sri G. SIVAPPA.—There is that scheme. In certain places they have sanctioned the amount under that scheme. Has not that scheme come under the Central Government Aid ? Sir, I think there is such a scheme in our District and the Deputy Commissioner has recommended certain places.

Sri T. CHANNIAH.—Yes, the Government of India are contemplating to usher in such a scheme and they have also promised to give some amount of Central assistance also.

ಶ್ರೀ ವಿ. ಮಸಿಯಪ್ಪ.—Rural Development grants ನಲ್ಲಿ water supply ಗೆ ಕೊಡುವುದನ್ನು Non-lapsable ಆಗಿ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಇಲ್ಲ; ಸಾಮಾನ್ಯವಾಗಿ ಅದು ಲ್ಯಾಪ್ಸ್ ಆಗಕೂಡದೆಂದು ಹೇಳಿ ಗ್ರಾಮ ಪಂಚಾಯತಿಗೆ credit ಮಾಡಲಾಗುತ್ತಿದೆ. ಅದು lapse ಆಗುವುದಿಲ್ಲ.

ಶ್ರೀ ವಿ. ಮಸಿಯಪ್ಪ.—ತಾವು ಇಲ್ಲ (ಸಿ) ಪ್ರಶ್ನೆಗೆ ಖರ್ಚಾಗದೆ ಹಾಗೆ ಉಳಿದ ಮೊಬಲಗು ಯಾವುದೂ ಇಲ್ಲ ಎಂದು ಉತ್ತರ ಕೊಡೋಣವಾಗಿದ್ದರೂ (ಬ)ಗೆ ಉತ್ತರವಾಗಿ (1) ರೂ. 48,153-2-0 ಮತ್ತು (2) ರೂ. 7,359-8-0 ಹೀಗೆ ಸುಮಾರು 54-55 ಸಾವಿರ ರೂಪಾಯಿಗಳನ್ನು ಈ ಉದ್ದೇಶಕ್ಕಾಗಿ ಒದಗಿನರಾಗಿತ್ತೆಂದು ಹೇಳಿದ್ದೀರಿ. ಹೀಗಿರುವಾಗ ಖರ್ಚಾಗಿ ಉಳಿದ ಬಾಕಿ ಮೊಬಲಗನ್ನು ತಾವು ಹಾಗೇ ಒಂದು ಫಂಡಾಗಿ ರಿಜರ್ವ್‌ಮಾಡಿದ್ದೀರಾ ಅಥವಾ ಅದನ್ನು ಹೇಗೆ ಏರ್ಪೇರಿ ಮಾಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಹಾಗೆ ಈ ಬಾಬುಗಳಿಗಾಗಿ ಎಷ್ಟು ಮೊಬಲಗನ್ನು ಒದಗಿಸಲಾಗಿದ್ದಿತೋ ಅದರಲ್ಲ ಆ ಬಾಬುಗಳಿಗೆ ಖರ್ಚಾಗಿ ಉಳಿದ ಮೊಬಲಗನ್ನು ಆಯಾ ಗಾ ಮಪಂಚಾಯತಿಗಳಿಗೆ ಕೊಟ್ಟು ಅಲ್ಲಿ ಪೂರೈಸದೆ ಹಾಗೆಯೇ ಉಳಿದಿದ್ದಂಥ ಕೆಲನಗಳನ್ನು ಪೂರ್ತಿಗೊಳಿಸಲು ಆ ಮೊಬಲಗನ್ನು ಖರ್ಚುಮಾಡಿದ್ದೇವೆ.

Mr. SPEAKER.—No amount has lapsed. That is correct.

ಶ್ರೀ ವಿ. ಮಸಿಯಪ್ಪ.—1953-54 ಕ್ಕೆ ತಾವು ಈ ಜಮೀನ್ ಕಂದಾಯದಿಂದ ಈ ಬಾಬುಗಳಿಗೆ ಅಸ್ಸೆಟ್ ಮಾಡಿರತಕ್ಕಂಥ 5 ರೂಪಾಯಿಗಳ ಗ್ರಾಂಟ್ ಕೇವಲ ಇದೊಂದು ಚೋಕನ್ ಗ್ರಾಂಟ್ ಎಂಬತಕ್ಕ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ವಿ. ಮಸಿಯಪ್ಪ.—ಆದುದರಿಂದ ಈ ಪೊಬಲಗು ಇಷ್ಟು ಕಮ್ಮಿ ಇರುವುದರಿಂದ ಇದು ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿನ ನರಬರಾಯ ವ್ಯವಸ್ಥೆಗೆ ಸಾಕಾಗುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ಎಲ್ಲಾ ಗ್ರಾಮಗಳಲ್ಲೂ ಈ ಕುಡಿಯುವ ನೀನೀರಿನ ಬಾವಿಗಳನ್ನು ತೆಗೆಸುವಂಥ ಕೆಲಸವನ್ನು ಏಕ ಕಾಲದಲ್ಲೇ ನಾವು ಕೈಗೊಳ್ಳುವುದಿಲ್ಲ. ಎಲ್ಲೆಲ್ಲಿ ಬಹಳ ಅಗತ್ಯವಾಗಿರುತ್ತದೆಂದು ಕಂಡುಬರುತ್ತದೆಯೋ ಅಂಥ ಸ್ಥಳಗಳಲ್ಲಿ ಮಾತ್ರ ಇದನ್ನು ಮೊದಲು ಕೈಗೊಂಡು ಆ ಕೆಲಸಗಳು ಮುಗಿದನಂತರ ಬಾಕಿ ಪ್ರದೇಶದ ಕೆಲಸವನ್ನು ಕೈಗೊಳ್ಳುತ್ತೇವೆ. ಆದುದರಿಂದ ಇದು ಸಾಕಾಗುತ್ತದೆ.

ಶ್ರೀ ವಿ. ಮಸಿಯಪ್ಪ.—ಹಾಗಾದರೆ ಒಂದು ಜಿಲ್ಲೆಗೆ ಅಲಾಟ್‌ಮಾಡಿದ ಪೊಬಲಗನ್ನು ಅಲ್ಲಿ ಆ ಹಣ ಖರ್ಚಾಗದೆ ಉಳಿದುಬಿಟ್ಟರೆ ಅದನ್ನು ಬೇರೆ ಜಿಲ್ಲೆಗೆ ಖರ್ಚು ಮಾಡಬಹುದೆಂಬುದು ತಮ್ಮ ಭಾವನೆಯೇ?

(ಉತ್ತರವಿಲ್ಲ).

Mr. SPEAKER.—No discussion on that matter.

ಶ್ರೀ ಟಿ. ಹನುಮಯ್ಯ.—ಹೊಳಲ್ಕೆರೆ ತಾಲ್ಲೂಕು ಹಿರೇದೇವನಹಳ್ಳಿಯಲ್ಲಿ ಈ ಕುಡಿಯುವ ನೀರಿನ ಬಾವಿ ವ್ಯವಸ್ಥೆಯನ್ನು ಇನ್ನೂ ಒದಗಿಸದಿರುವ ಕಾರಣ ಅಲ್ಲಿ ದೊಡ್ಡ ವ್ಯಾಜ್ಯವಾಗಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಈ ಪ್ರಶ್ನೆಗೆ ಆ ವಿಷಯ ಸಂಬಂಧಪಡುವುದಿಲ್ಲ.

Devanahalli and Yelahanka Municipalities (Bore-well Work).

Q.—527. Sri K. V. BYRE GOWDA (Bangalore North).—

Will the Government be pleased to state :—

(*a*) the extent of financial help granted by them to Devanahalli and Yelahanka Municipalities for providing drinking water facilities ;

(*b*) how many years ago the bore-well work was commenced at Yelahanka ;

(*c*) the amount spent ;

(*d*) the period required for completing the said work ?

A.—Sri T. CHANNIAH (Minister for Public Health and Local Self-Government).—

(*a*) Rs. 18,000 and Rs. 15,000 to the Devanahalli and Yelahanka Town Municipalities, respectively.

(*b*) About seven years ago.

(*c*) About Rs. 22,000.

(*d*) About three months.

ಶ್ರೀ ಕೆ. ವಿ. ಬೈರೇಗೌಡ.—ಈ ಹಣವನ್ನು ಆ ಮುನಿಸಿಪಾಲಟಿಯವರು ತೆಗೆದುಕೊಂಡಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ತೆಗೆದುಕೊಂಡಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ಯಲಹಂಕದಲ್ಲಿ ಬೋರ್‌ವೆಲ್‌ಗಳ ಕೆಲಸ ಏಳುವರ್ಷಗಳಿಂದಲೂ ಒಂದೇ ಸಮನಾಗಿ ನಡೆಯುತ್ತಿರುವುದರಿಂದ ಆ ಕೆಲಸ ನಡೆಸುವ ಪೆಷಿನರಿಯಲ್ಲಿ ಮತ್ತು ಸಿಬ್ಬಂದಿಯಲ್ಲಿ ಕೂಡ ಏನೋ ಒಂದು ನ್ಯೂನತೆಯಿರುತ್ತದೆಂಬ ಅಂಶ ತಮ್ಮ ಅವಗಾಹನೆಗೆ ಬಂದಿಯೇ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ಈಗಾಗಲೇ ಮೂರು ಬೋರ್‌ವೆಲ್‌ಗಳನ್ನು ತೆಗೆದಿದ್ದಾರೆ. ಅಲ್ಲಿ ಒಟ್ಟಿಗೆ ಒಂಬತ್ತು ಬೋರ್‌ವೆಲ್ಲುಗಳನ್ನು ತೆಗೆಸತಕ್ಕಂಥ ಅಂದಾಜು ಮಾಡಲಾಗಿತ್ತು. ಆದರೆ ಆಷ್ಟರಲ್ಲೇ ಈ ಪೆಷಿನರಿ ಮಂಡ್ಯದ ಜಿಲ್ಲೆಗೆ ಬಹಳ ತ್ವರಿತವಾಗಿ ಬೇಕಾಗಿದ್ದುದರಿಂದ ಇಲ್ಲಿಯ ಕೆಲಸವನ್ನು ನಿಲ್ಲಿಸಿ ಆ ಯಂತ್ರಗಳನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಆದರೆ ಈಗ ಆ ಯಂತ್ರ ಸಾಮಗ್ರಿಗಳೆಲ್ಲಾ ಹಿಂದಕ್ಕೆ ಬಂದಿರುತ್ತವೆ. ಈಗಾಗಲೇ 5-6 ಬಾವಿಗಳ ಕೆಲಸಗಳು ಮುಗಿಯುತ್ತಾ ಬಂದಿವೆ. ಕೆಲಸ ನಡೆಯುತ್ತಿದೆ.

ಶ್ರೀ ಕೆ. ವಿ. ಬೈರೇಗೌಡ.—ದೇವನಹಳ್ಳಿಯಲ್ಲ ನೀರಿನ ವ್ಯವಸ್ಥೆಗೆ ಏನು ಅನುಕೂಲ ಮಾಡಿದ್ದೀರಿ?

ಶ್ರೀ ಟಿ. ಚೆನ್ನಯ್ಯ.—ತಾವು ಕೇಳಿದ್ದು ಯಾವ ತಾಲ್ಲೂಕಿಗೆ?

ಶ್ರೀ ಕೆ. ವಿ. ಬೈರೇಗೌಡ.—ದೇವನಹಳ್ಳಿ.

ಶ್ರೀ ಟಿ. ಚನ್ನಯ್ಯ.—ಅಲ್ಲಿ ಎರಡು ಬಾವಿಗಳಿಗಾಗಿ 18 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಆದರೆ ಈಗ ಅಲ್ಲಿ ಕೆಲಸ ಪ್ರಾರಂಭಮಾಡಿರುವ ಕಡೆ ನೀರಿನ ಸೌಕರ್ಯ ಚೆನ್ನಾಗಿ ಇರುತ್ತದೆಯೇ ಎಂಬುದನ್ನು ನೋಡಿಕೊಂಡು ಕೆಲಸವನ್ನು ಮುಂದುವರಿಸಬೇಕೆಂಬ ಆಲೋಚನೆಯಿದೆ. ಈಗ ಆ ಕೆಲಸಕ್ಕೆ ಒಂದು ಲಕ್ಷ 25 ಸಾವಿರ ರೂಪಾಯಿಗಳ ಅಂದಾಜು ತಯಾರಾಗಿದೆ. ಆ ವಿಚಾರ ಆಲೋಚನೆಯಲ್ಲಿದೆ.

ಶ್ರೀ ಕೆ. ವಿ. ಬೈರೇಗೌಡ.—ಇನ್ನು ಮೂರು ತಿಂಗಳೊಳಗಾದರೂ ಅಲ್ಲಿಗೆ ನೀರಿನ ಸೌಕರ್ಯವನ್ನು ಒದಗಿಸಿಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ಒದಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ದೇವನಹಳ್ಳಿ ಬಾವಿ ಕೆಲಸವನ್ನು ಈಗ ನಡೆಸುತ್ತಿದ್ದಾರೆಯೇ, ಹಾಗೆ ಇದನ್ನು ಕೈಗೊಳ್ಳಬೇಕೆಂದು ತಾವು ಅವರಿಗೆ ತಿಳಿಸಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಹಾಗೆ ಕೆಲಸವನ್ನು ಪ್ರಾರಂಭಿಸಿರುತ್ತಾರೆಯೇ ಅಥವಾ ಇನ್ನೂ ಇಲ್ಲವೇ ಅನ್ನುವುದು ಗೊತ್ತಿಲ್ಲ. ವಿಚಾರಿಸಿ ಹೇಳುತ್ತೇನೆ.

Sri. K. PUTTASWAMY.—You have been pleased to say that the bore well machine was diverted. What wa reason for diverting the machine the well work that was taken up not yet completed ?